ತುಂತುರ ಹನಿಗಳನ್ನು ಚಿಮುಕಿಸತೊಡಗಿತು. ಅದರ ಪ್ರಣಯ ಚೇಷ್ಟೆಯ ರೀತಿ ಅದಾಗಿತ್ತು. ಇಡೀ ಬೇಸಿಗೆ ಇಂಥ ಚೇಷ್ಟೆಗಳಲ್ಲೇ ಕಳೆದು ಹೋಯಿತು.

'ಅದರ ಪ್ರೇಮದ ಗುಂಗು ಹಾಸ್ಯಾಸ್ಪದವಾಗಿದೆ. ಆ ಜೇಕುಗರಿಕೆಯ ಬಳಿ ಹಣವಿಲ್ಲ. ಅದರ ಬಳಗವೂ ತುಂಬ ದೊಡ್ಡದು. ಈ ನದಿ ಜೇಕುಗರಿಕೆಗಳಿಂದಲೇ ತುಂಬಿ ಹೋಗಿದೆ.' ಎಂದು ಇನ್ನಿತರ ಸ್ವಾಲೋ ಹಕ್ಕಿಗಳು ತಮ್ಮತಮ್ಮೊಳಗೆ ಮಾತಾಡಿಕೊಳ್ಳುತ್ತಿದ್ದವು. ನಂತರ ಶರದೃತು ಬಂದೊಡನೆ ಅಲ್ಲಿಂದ ಅವು ಹಾರಿ ಹೋದವು.

ಅವೆಲ್ಲ ಹೋದ ಬಳಿಕ ಆ ಸ್ವಾಲೋ ಹಕ್ಕಿಗೆ ಏಕಾಕಿತನ ಕಾಡತೊಡಗಿತು. ತನ್ನ ಪ್ರಿಯತಮೆ ಜೇಕುಗರಿಕೆಯ ಬಗ್ಗೆ ಅದಕ್ಕೆ ನಿರಾಸಕ್ತಿ ಉಂಟಾಗಿತ್ತು. ಏಕೆಂದರೆ ಅದು ಒಂದು ಶಬ್ದ ಕೂಡ ಮಾತಾಡುತ್ತಿರಲಿಲ್ಲ. ಅಲ್ಲದೆ ಅದು ಗಾಳಿಯೊಡನೆ ಸರಸವಾಡುವುದನ್ನು ಕಂಡು ಅದರ ಬಗ್ಗೆ ಸಂದೇಹವುಂಟಾಯಿತು. ಮೇಲಾಗಿ ಅದು ತನ್ನ ಬಳಗ ಬಿಟ್ಟು ಎಲ್ಲೂ ಕದಲುತ್ತಿರಲಿಲ್ಲ. ತನ್ನ ಮಡದಿಯಾಗಿ ಬರಬೇಕಾದರೆ ತನ್ನ ಜೊತೆ ಅಲೆದಾಡುವುದು ಅನಿವಾರ್ಯ ಎಂದು ಅದು ತನ್ನಷ್ಟಕ್ಕೆ ಯೋಚಿಸಿತು.

'ನೀನು ನನ್ನ ಜೊತೆ ಬರುವೆಯಾ?' ಎಂದು ಅದು ಕೊನೆಯ ಬಾರಿಗೆ ಜೇಕುಗರಿಕೆಯನ್ನು ಕೇಳಿತು. ತನ್ನ ಬಳಗದ ಜೊತೆ ಅತಿಯಾಗಿ ಅಂಟಿಕೊಂಡಿದ್ದ ಅದು ಗೋಣು ಅಲ್ಲಾಡಿಸಿ ತನ್ನ ಅಸಮ್ಮತಿ ಸೂಚಿಸಿತು.

'ನನ್ನ ಜೊತೆ ನೀನು ಹುಡುಗಾಟವಾಡಿದೆ' ಎಂದು ಅರಚುತ್ತ, 'ನಾನೀಗ ಪಿರಾಮಿಡ್‌ಗಳ ದೇಶಕ್ಕೆ ಹೊರಟಿರುವೆ' ಎಂದು ಹೇಳಿ ಅಲ್ಲಿಂದ ಹಾರಿ ಹೋಯಿತು.

ಇಡೀ ದಿನ ಹಾರಾಡುತ್ತ ಸಾಗಿ, ರಾತ್ರಿ ಹೊತ್ತಿಗೆ ಆ ನಗರ ತಲುಪಿತು. 'ಈ ರಾತ್ರಿ ಎಲ್ಲಿ ಕಳೆಯಲಿ? ನಗರದ ಜನತೆ ಮಲಗಲು ಸಿದ್ಧವಾದಂತಿದೆ' ಎಂದು ವಿಚಾರಿಸತೊಡಗಿತು.

ಅನಂತರ ಅದು ಎತ್ತರವಾದ ಸ್ತಂಭದ ಮೇಲಿರುವ ಪ್ರತಿಮೆಯನ್ನು ನೋಡಿತು. 'ನಾನು ಇಲ್ಲಿ ಈ ರಾತ್ರಿ ಕಳೆಯಬಹುದಾಗಿದೆ. ಸಾಕಷ್ಟು ಪರಿಶುದ್ಧ ಗಾಳಿ ಇರುವ ಉತ್ತಮ ಸ್ಥಳವಿದು' ಎಂದುಕೊಂಡು ಅದು ಸುಖಿ ರಾಜಕುಮಾರನ ಪ್ರತಿಮೆಯ ಪಾದಗಳ ನಡುವೆ ಹಗುರಾಗಿ ಇಳಿಯಿತು.

'ನನಗಾಗಿ ಇಲ್ಲಿ ಬಂಗಾರದ ಮಲಗುವ ಕೋಣೆಯಿದೆ' ಎಂದು ಪಿಸುಗುಡುತ್ತ ಸುತ್ತೆಲ್ಲ ನೋಡಿ ಮಲಗಲು ಸಿದ್ಧವಾಯಿತು. ಇನ್ನೇನು ತನ್ನ ರೆಕ್ಕೆಯೊಳಗೆ ತಲೆ ಹುದುಗಿಸಿಕೊಳ್ಳಬೇಕೆನ್ನುವಷ್ಟರಲ್ಲಿ, ಒಂದು ದೊಡ್ಡ ಹನಿ ಅದರ ಮೇಲೆ ಬಿದ್ದಿತು. 'ಎಂಥ ವಿಚಿತ್ರ ಸಂಗತಿಯಿದು! ಆಕಾಶದಲ್ಲಿ ಒಂದು ಮೋಡ ಕೂಡ ಇಲ್ಲ. ನಕ್ಷತ್ರಗಳೂ ಫಳಫಳ ಹೊಳೆಯುತ್ತಿವೆ. ಹೀಗಿದ್ದೂ ಮಳೆಹನಿ ಉದುರುತ್ತಿದೆಯಲ್ಲ? ಉತ್ತರ ಯುರೋಪ್‌ನ ವಾತಾವರಣವೇ ಅನಿಶ್ಚಿತ ಹಾಗೂ ಭಯಾನಕವಾದುದು. ಜೇಕುಗರಿಕೆಗೆ ಮಳೆ ಅಂದರೆ ಇಷ್ಟ. ಅದೆಲ್ಲ ಅದರ ಸ್ವಾರ್ಥ ಬುದ್ಧಿ' ಎಂದು ತನ್ನಷ್ಟಕ್ಕೆ ತಾನೆ ಗೊಣಗಿಕೊಂಡಿತು. ಅಷ್ಟರಲ್ಲಿ ಇನ್ನೊಂದು ಹನಿ ಬಿದ್ದಿತು.

'ಮಳೆಗೆ ಆಸರೆ ನೀಡದ ಈ ಪ್ರತಿಮೆಯ ಪ್ರಯೋಜನವಾದರೂ ಏನು? ಇಲ್ಲಿಂದ ಹಾರಿ ಆ ಹೊಗೆ ಕೊಳವೆಯ ಕೆಳಗೆ ಆಸರೆ ಪಡೆಯುವುದೇ ಲೇಸು' ಎಂದು ನಿಶ್ಚಯಿಸಿ, ಅಲ್ಲಿಂದ ಹಾರಲು ರೆಕ್ಕೆ ಬಿಚ್ಚುವುದೇ ತಡ ಮೂರನೆಯ ಹನಿ ಬಿದ್ದಿತು. ಅದು ಕತ್ತೆತ್ತಿ ಮೇಲೆ ನೋಡಿತು. ಅದಕ್ಕೆ ಅಲ್ಲಿ ಕಂಡಿದ್ದೇನು?

ಸುಖಿ ರಾಜಕುಮಾರನ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತ್ತು. ಆತನ ಚಿನ್ನದ ಕೆನ್ನೆಗಳ